



ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಕಳ್ಳ ಮತ್ತು ಕಳ್ಳಿ ಪ್ರೇಮಿಗಳಾದರೆ?



ಅವರಿಗೆ ನಿಜವಾದ 'ಕಳ್ಳ ನನ್ಮಗ' ಹುಟ್ಟುತ್ತಾನೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ವಯಸ್ಸಾದಂತೆ ಮಿಕ್ಕೆಲ್ಲ ಇಂದ್ರಿಯಗಳು ದುರ್ಬಲವಾದರೂ ನಾಲಿಗೆಯ ಚಪಲ ಮಾತ್ರ ಕಡಿಮೆಯಾಗದಲ್ಲ?
ನಾಲಿಗೆ ಸದಾ ಚಟುವಟಿಕೆಯಿಂದ ಇರುತ್ತದಲ್ಲ. ಜಂಗಮಕ್ಕಳಿವಿಲ್ಲ!

ಕಾಳೀಹುಂಡಿ ಶಿವಕುಮಾರ್, ಮೈಸೂರು
ಮನದಲ್ಲೆಷ್ಟೇ ನೋವಿದ್ದರೂ ನನ್ನ ಗೆಳೆಯನೊಬ್ಬ ಸದಾ ನಗುತ್ತಿರುತ್ತಾನಲ್ಲ...?
ಅತ್ತರೆ ಇರುವ ಗೆಳೆಯರೂ ದೂರವಾಗುವರೆಂದು ತಿಳಿದಿದೆಯಂತೆ.

ಬಿ. ಚಂದ್ರೇಗೌಡ, ಬೆಂಗಳೂರು
ಇಬ್ಬರು ಹೆಂಡಿರ ಗಂಡ ಸುಖಿಯೋ, ಒಬ್ಬಳೇ ಸತಿಯ ಗಂಡ ಸುಖಿಯೋ?



ಕೊಂಚ ಇರಿ... ನಿಮಗೆ ಗಂಡನೆಂಬ ಪ್ರಾಣಿಯು ಸುಖಿ ಎಂದು ಯಾರು ಹೇಳಿದರು?

ನಾರಾಯಣ ಯಾಜಿ, ಶಿರಾಲಿ
ನಮ್ಮ ತರಹೇವಾರಿ ಪ್ರಶ್ನೆಗಳನ್ನುತ್ತರಿಸುವ ಮುನ್ನ ಓದಿ ನಕ್ಕು ನಕ್ಕು ನಿಮಗೆ ಪುಗ್ಸಟ್ಟೆ ಆರೋಗ್ಯಭಾಗ್ಯ ಪ್ರಾಪ್ತವಲ್ಲವೆ?
100% ನಿಜ. ನನ್ನ ಗಹಗಹಿಕೆಯನ್ನು ಕಂಡು ಮತ್ಸರದಿಂದ ಅಕ್ಕಪಕ್ಕದವರ ಬಿಪಿಯೂ ಏರಿದೆ.

ಹರಿತಸ, ಬೆಂಗಳೂರು
ಮನಸ್ಥಿತಿಗೂ, ದೇಹಸ್ಥಿತಿಗೂ ವ್ಯತ್ಯಾಸವೇನು ರಾಮ್?
ದೇಹಸ್ಥಿತಿ ಹದಗೆಟ್ಟರೂ ಸ್ವಾವಲಂಬನೆ ಸಾಧ್ಯ.

ಗಾಯತ್ರಿ, ರಾಜಾಜಿನಗರ
ನಿಮ್ಮ ಕಣ್ಣಿಗೆ ನಾವು ಬೀಳಲು ಎಷ್ಟು ಸಲ ಪ್ರಯತ್ನ ಪಡಬೇಕು?
ಛೆ! ಹಾಗೆ ಬೀಳಲು ನೀವೇನು ದೂಳೇ?

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಪ್ರೀತಿಯ ಕಾಯಿಲೆಯು ಹೆಚ್ಚಾಗಿ ಯಾರನ್ನು ಕಾಡುತ್ತದೆ?
ಆಕರ್ಷಣೆಯೆಂಬ ವೈರಸ್‌ಗೆ ತುತ್ತಾದವರನ್ನು.

ಗಂಜಾಂ ನಾಗರಾಜ್, ಮೈಸೂರು
ಪ್ರಶ್ನೆಗಳೆಲ್ಲಾ ಮುಗಿದುಹೋದರೆ ನೀವೇನು ಮಾಡುತ್ತೀರಿ?
ಜಾಲತಾಣದಲ್ಲಿ ಸುಂದರಿಯ ಅಸ್ಪಷ್ಟ ಚಿತ್ರ ಹಾಕುತ್ತೇನೆ. ನೂರಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಕೆಲ ಗಣ್ಯರು ಹುಟ್ಟು ಹಬ್ಬದ ಜಾಹೀರಾತುಗಳಲ್ಲಿ ವಯಸ್ಸನ್ನು ಪ್ರಕಟಿಸುವುದಿಲ್ಲ. ಏಕೆ?
ಹೊಸ ವಿನ್ಯಾಸದ ಖರ್ಚಿಲ್ಲದೆ ಅದೇ ಜಾಹೀರಾತನ್ನು ಮರುವರ್ಷವೂ ಬಳಸಬಹುದೆಂದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಬೆಳಕು ಕತ್ತಲೆಗೆ ಹೆದರುವುದೋ, ಕತ್ತಲೆ ಬೆಳಕಿಗೆ ಹೆದರುವುದೋ?
ಭಯವೆಂದೇನಿಲ್ಲ; ಎರಡೂ ವಿರೋಧ ಪಕ್ಷಗಳಾದ್ದರಿಂದ ಯಾವುದಾದರೂ ಒಂದರ ಆಡಳಿತ ಇರುತ್ತದಷ್ಟೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ರಾಜಕಾರಣಕ್ಕೆ ಶಾಲೆ ಆರಂಭಿಸಲಾಗುವುದೆಂಬ ಮಾತು ಕೇಳಿಬರುತ್ತಿದೆಯಲ್ಲ?
ಈಗಲೇ ಇದೆ. ಅದರ ಹೆಸರು 'ಪರಪ್ಪನ ಅಗ್ರಹಾರ'.

ಬೂಕನಕೆರೆ ವಿಜೇಂದ್ರ, ಮೈಸೂರು
ದುಡ್ಡು ಸಂಪಾದಿಸಿ ಯಾರಾದರೂ ಮನೆ ಕಟ್ಟಿದ ಉದಾಹರಣೆ ಇದೆಯಾ?
ಹದಿಮೂರು ವರ್ಷ ನಿರ್ಭಯವಾಗಿ ರಾಜ್ಯವನ್ನೇ ಕಟ್ಟಿಕೊಂಡ ಕೌರವರೇ ಇದ್ದರಲ್ಲ.

## ಬಹುಮಾನಿತ ಪ್ರಶ್ನೆ

ಹೆಚ್.ವಿ. ಶ್ರೀಧರ್, ಬೆಂಗಳೂರು
ಭಾವಿ ಎಂದರೆ ಭವಿಷ್ಯದಲ್ಲಾಗುವ ಸಂಬಂಧ. ಮುಂದೆ ಹುಟ್ಟಲಿರುವ ಮಗುವಿಗೇಕೆ ಭಾವಿ ಪುಟ್ಟ ಎನ್ನುವುದಿಲ್ಲ?
ಇದು ಇನ್ನೂ ಜೀವನದ ಆಳ ಕಂಡಿರುವುದಿಲ್ಲವಲ್ಲ.

ಮಂಡಿ ಕುಮಾರ್, ಬೆಂಗಳೂರು
ಸತ್ಯಕ್ಕೆ ಸಾವಿಲ್ಲ. ಸುಳ್ಳಿಗೆ?
ದಿನದಿನವೂ ಹೊಸಾ ಏಲ್ಲಾ!

ವಿ. ಹೇಮಂತಕುಮಾರ್, ಬೆಂಗಳೂರು
ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸುವರೆ?
ಹೊಸ ಹಾದಿಯಲ್ಲಿ ನಡೆಯುವವರಿಗೆ ಇತಿಹಾಸದ ಅಗತ್ಯವಿಲ್ಲ.

ರತ್ನಜ, ಮೈಸೂರು
ಜೈಲಿನಲ್ಲಿರುವ ಖೈದಿಗಳಿಗೆ ಗಾಂಧಿಟೋಪಿ ಯಾಕೆ ಗುರೂ?



ಗಾಂಧಿಯ ಸೋಗಿನಲ್ಲಿ ಟೋಪಿ ಹಾಕುವವರು ಬಹಳವೆಂದು ಸೂಚಿಸಲಂತೆ.

ಬಿ.ಆರ್. ಉಷಾ, ಕೆನಡಾ
ನಿಮ್ಮ ಮೆದುಳಿಗೆ ಯಾವ ಗೊಬ್ಬರ ಹಾಕುತ್ತೀರಾ?
ನಿಮ್ಮೆಲ್ಲರ ಪ್ರಶ್ನೆಗಳನ್ನು ರುಬ್ಬಿ ಸೃಷ್ಟಿಸಿದ ಅಧ್ಯಯನದ ಗೊಬ್ಬರ.

ರಾಮಚಂದ್ರ, ಮಾರಳ್ಳಿ
ವಾರದ ಪ್ರಶ್ನೆಯನ್ನು ಹೈಲೈಟ್ ಮಾಡುವಂತೆ ವಾರದ ಉತ್ತರವನ್ನೇಕೆ ಹೈಲೈಟ್ ಮಾಡುವುದಿಲ್ಲ?
ಒಬ್ಬೊಬ್ಬ ಓದುಗನ ಮನದಲ್ಲಿ ಒಂದೊಂದು ಉತ್ತರ ಹೈಲೈಟ್ ಆಗುವುದರಿಂದ.

ದೀಪಕ್ ಜಿ.ಕೆ. ಬೆಂಗಳೂರು
ಚೆನ್ನಾಗಿ ಬರೆಯುವವರಿಗೂ, ಚೆನ್ನಾಗಿರುವವರು ಬರೆಯುವವರಿಗೂ ಸಂಬಂಧವೇನು?
ಚೆನ್ನಾಗಿರುವವರು ತಪ್ಪು ಮಗ್ಗಿ ಬರೆದರೂ ಲೈಕುಗಳ ಸುರಿಮಳೆ.

**ರಾಮ್**